O.S.36/2017

DW : 4

ದಿನಾಂಕ 27-06-2019 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃಶ್ರೀ ಎಸ್ ವಿ ಟಿ ವಕೀಲರಿಂದಃ

ನಾನು ಪದವೀಧರ. ನಾವು 3 ಜನ ಸಹೋದರರು. ಸರ್ವೆ ನಂ.2/1 ರಲ್ಲಿ 3 ಎಕರೆ 14 ಗುಂಟೆ ವಿಸ್ತೀರ್ಣದಲ್ಲಿ ಸಾಗುವಳಿ ಮಾಡುತಿತದ್ದೇನೆ. ಸದರಿ ಜಮೀನು ನಿಮ್ಮ ತಂದೆಗೆ ಭೂ ನ್ಯಾಯಮಂಡಳಿಯಿಂದ ಮಂಜೂರಾಗಿದೆ ಎಂದರೆ ಸಾಕ್ಷಿ ನಮ್ಮ ತಾತನಿಂದ ನಮ್ಮ ತಂದೆ ಸದರಿ ವಿಸ್ತೀರ್ಣವನ್ನು ಪಡೆದು ಸಾಗುವಳಿ ಮಾಡುತ್ತಿದ್ದಾರೆ. ತುಮ್ಮಿನಕಟ್ಟಿ ಗ್ರಾಮದಲ್ಲಿರುವ ಬಹುತೇಕ ಜಮೀನುಗಳು ಉತ್ತರಾಧಿಮಠ ಜಮೀನುಗಳು ಎಂದರೆ ಸರಿ. ಮಠದವರ ಮೌಖಿಕ ಅನುಮತಿಯ ಮೇರೆಗೆ ಗ್ರಾಮಸ್ಥರು ಕೆಲ ಜಮೀನುಗಳ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. 1944 ರಲ್ಲಿ ವಾದಿಗಳ ತಂದೆ ಗೋಣಿಬಸಪ್ಪ ಇವರಿಗೆ ದಾವಾಸ್ತಿ ಸಾಗುವಳಿ ಮಾಡಲು ಸದರಿ ಮಠದವರುನೀಡಿದ್ದರು ಎಂದರೆ ಅವರ ಹೆಸರು ಕೇಳಿಲ್ಲ ಎನ್ನುತ್ತಾರೆ, ಸಾಕ್ಷಿ ನಿಪಿ-1 ನ್ನು ನೋಡಿ ಅದರಲ್ಲಿರುವ ಎಂಟ್ರಿ ಸರಿ ಎನ್ನುತ್ತಾರೆ. ನಿಪಿ-1ರಲ್ಲಿ ನಮೂದಿಸಿರುವ ವ್ಯಕ್ತಿ ಆಸ್ತಿಯ ಸ್ವಾಧೀನದನುಭವದಲ್ಲಿದ್ದ ಕಾರಣ ನಿಪಿ-1, 2 (3 ಪುಟ) ನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. 1977-78 ರಲ್ಲಿ ಸರ್ವೆ ನಂ.2/1, 1 ಎಕರೆ 8 ಗುಂಟೆ ಜಮೀನನ್ನು ವಾದಿಗಳ ತಂದೆ ಗೋಣಿಬಸಪ್ಪ ಇವರಿಂದ ಕ್ರಯ ಮಾಡಿಕೊಂಡಿದ್ದೇವೆ. ಸದರಿ ವಿಚಾರವನ್ನು ಪ್ರತಿವಾದ ಪತ್ರದಲ್ಲಿ ಬರೆಸಿದ ನೆನಪಿಲ್ಲ, ಆದರೆ ದಾಖಲೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಭೂ ನ್ಯಾಯ ಮಂಡಳಿಯ ಆದೇಶಕ್ಕೂ, ದಾವಾಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಗಳ ತಂದೆ ಅವಿದ್ಯಾವಂತರಾದ ಕಾರಣ ಅವರು ಭೂನ್ಯಾಯ ಮಂಡಳಿಗೆ ಅರ್ಜಿ ನೀಡಲಿಲ್ಲ ಎಂಬ ಕಾರಣಕ್ಕೆ ಅದರ ದುರುಪಯೋಗ ಮಾಡಿಕೊಂಡು ಕಂದಾಯದ ದಾಖಲೆ ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. 1977 ರಿಂದ ಈ ದಿನವರೆಗೆ ವಾದಿಗಳ ತಂದೆ ಹಾಗೂ ವಾದಿಗಳೇ ದಾವಾಸ್ತಿಯ ಸ್ವಾಧೀನದಾರರು, ನೀವು ಸ್ವಾಧೀನದಾರರಲ್ಲ ಎಂದರೆ ಸರಿಯಲ್ಲ, ವಾದಿಗಳು ದಾವಾಸ್ತಿಯ ವಿರುದ್ದ ಸ್ವಾಧೀನದ ನಾತೆಯಿಂದ ಅವರೇ ದಾವಾಸ್ತಿಯ ಮಾಲೀಕರು ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.